Rotary
ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD



Rtn. Francesco Arezzo
R.I. President



Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 21
ದಿನಾಂಕ: 25.11.2025



Rtn. Anil Kumar
President



Rtn. Krishnappa
Secretary

## ಪ್ರಥಮ ಬಾರಿಗೆ ಐಸಿರಿಯ ಸ್ಕಿಟ್ ಗೆ ರೋಟರಿ ಜಿಲ್ಲಾ ಮಟ್ಟದ ಬಹುಮಾನ



ಇದೇ ಪ್ರಥಮ ಬಾರಿಗೆ ರೋಟರಿಯ ಪ್ರತಿಷ್ಠಿತ ಜಿಲ್ಲಾ ಸಾಂಸ್ಕೃತಿಕ ಸಂಗಮದಲ್ಲಿ ರೋಟರಿ ಐಸಿರಿಯ ತಂಡದ ಸ್ಕಿಟ್ (ಕಿರು ಪ್ರಹಸನ) ಬಹುಮಾನ ಗೆದ್ದು ಬೀಗಿತು. ನವೆಂಬರ್ 23ರಂದು ಉಡುಪಿ, ಶಿವಮೊಗ್ಗ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ 87 ರಷ್ಟು ರೋಟರಿ ಕ್ಲಬ್ ಸದಸ್ಯರು ಭಾಗವಹಿಸಿದ "ಶೃಂಗ ವೈಭವ"ದ ಸಮಾರೋಪ ಸಮಾರಂಭದಲ್ಲಿ ನಡೆದ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಅವರು ರೋಟರಿ ಐಸಿರಿಯ ಹೆಸರನ್ನು ತೃತೀಯ ಬಹುಮಾನಕ್ಕಾಗಿ ಉಧ್ಘೋಷಿಸಿದಾಗ, ಪುಳಕಿತರಾದ ನಮ್ಮ ಸದಸ್ಯರು, ಭಾಗವಹಿಸಿದ ಕುಟುಂಬದ ಸದಸ್ಯರೆಲ್ಲರೊಡನೆ ವೇದಿಕೆಗೆ ಧಾವಿಸಿ, ಸಭಿಕರೆಲ್ಲರ ಹರ್ಷೋದ್ಗಾರದ ನಡುವೆ ಡಾ. ಎಂ. ಮೋಹನ್ ಆಳ್ವ ಅವರಿಂದ ಈ ಬಹುಮಾನ ಪಡೆದು ಹೊಸ, ಸದಾ ಸ್ಮರಣೀಯ ಮೈಲಿಗಲ್ಲೊಂದನ್ನು ಸ್ಥಾಪಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ರವರ "ಜೈ ಜವಾನ್ – ಜೈ ಕಿಸಾನ್" ಧ್ಯೇಯದ ಇದೇ ಸ್ಕಿಟ್ ನವೆಂಬರ್ ಎರಡರಂದು ಉಡುಪಿಯಲ್ಲಿ ನಡೆದ ವಲಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನಗಳಿಸಿ ರೋಟರಿ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವ ಅರ್ಹತೆಗಳಿಸಿತ್ತು.

## ತಂಡದ ಗೌರವಾರ್ಥ ಇಂದು ಹೊರಾಂಗಣ ಸಭೆ

ವಲಯ ಮಟ್ಟದಲ್ಲಿ ಬಹುಮಾನಗಳಿಸಿದಾಗ ಮಾಡಿದಂತೆ ಈ ಬಾರಿಯೂ ರೋಟರಿ ಐಸಿರಿಯ ಸಮುದಾಯಸೇವಾ ನಿರ್ದೇಶಕರಾದ ರೊ. ಪ್ರಕಾಶ್ ಶೆಣೈಯವರು ಒಂದೇ ತಿಂಗಳಿನಲ್ಲಿ ಎರಡನೇ ಬಾರಿಗೆ ಅತ್ರಾಡಿಯ ನೂತನ ಶಾಂಭವೀ ಹೋಟೆಲ್ ಸಭಾಂಗಣದಲ್ಲಿ ಇಂದು ಹೊರಾಂಗಣ ಸಭೆಯನ್ನು ಆಯೋಜಿಸಿ ಪ್ರಾಯೋಜಿಸಿದ್ದು, ಈ ಸಭೆಯಲ್ಲಿ ಐಸಿರಿಯ ಸದಸ್ಯರೆಲ್ಲರ ಜೊತೆ ಸಂಭ್ರಮಾಚರಣೆಯ ಜೊತೆಗೆ ಭಾಗವಹಿಸಿದ ತಂಡದ ಗೌರವಾರ್ಥ ಸಹಭೋಜನವೂ ನಡೆಯಲಿದೆ.

## ಪ್ರೇರಣಾ ಸಿರಿ: ರೋಟರಿ ಮಾಹಿತಿ

*(Continued from the previous issues)*



Past Assistant Governor
Rtn. MPHF. Dr. Ganesha A
Treasurer, Rotary Aisiri

**Reasons Why a Rotarian should contribute to The Rotary Foundation (TRF):**

11. If Rotarians are not contributing, all the good activities of The Rotary Foundation can come to a grinding halt. Let us not allow it to happen.
12. According to 2006-07 TRF Chairman Luis Vicente Giay, one word clearly defines our Foundation is credibility which is the foremost quality required for any charity.
13. Even though the Rotary membership stood standstill at 1.2million last two decades, Foundation contribution kept on mounting that clearly shows that Rotarians love their Foundation. For stewardship and trustworthiness TRF ranks at the top of global Foundations.
14. TRF is working for peace in the world and Rotary's effort in polio eradication deserves a Nobel peace prize to which we are proud to contribute.
15. When new members join Rotary, they automatically become the owners of one of the most meaningful Foundations of the world without any extra payment. We need to tell them about TRF accomplishments.
16. The Rotary Foundation is slowly but steadily building its endowment fund so that in future it would be able to do projects from its own income. The current target set for the year 2025 is US Dollar 2025million.

*(Ref. 'Know Your Rotary' by Rtn. N. Bhaskaran Pillai)*

*Will be continued in next edition....*

---

## ತ್ವರಿತವಾದ ಚುಟುಕು ಸಂದರ್ಶನ ಪ್ರಶ್ನೆ: "ಶೃಂಗ ವೈಭವ"ದ ಈ ಸಾಧನೆಯ ಬಗ್ಗೆ ಏನನ್ನಿಸುತ್ತಿಸುತ್ತಿದೆ ?



ರೊ. ಸ್ಮಿತಾ ಜಿ. ಕಾಮತ್
ವಲಯ ಸೇನಾನಿ

"ಶೃಂಗೇರಿಯಲ್ಲಿ ನಡೆದ "ಶೃಂಗ ವೈಭವ" ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ರೋಟರಿ ಐಸಿರಿ ಭಾಗವಹಿಸಿತು. **ಮೊದಲ ಬಾರಿಗೆ ಜಿಲ್ಲಾ ಮಟ್ಟದಲ್ಲಿ ಮೂರು ಇವೆಂಟ್ ಗಳಲ್ಲಿ ಭಾಗವಹಿಸುವ ಅವಕಾಶ ದೊರಕಿದ್ದು ಸುಯೋಗ.** ಕಿರು ನಾಟಕ, ಗ್ರೂಪ್ ಡ್ಯಾನ್ಸ್ ಹಾಗೂ ಸೋಲೋ ಡ್ಯಾನ್ಸ್ (ಅನ್ನೈಟ್) ವಿಭಾಗದಲ್ಲಿ ಭಾಗವಹಿಸಿದ ಈ ಅನುಭವ ಅವಿಸ್ಮರಣೀಯ. ಪ್ರತೀ ಪ್ರದರ್ಶನವೂ ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ. **ಜಿಲ್ಲಾ ಮಟ್ಟದ ಉತ್ಕೃಷ್ಟ ವೇದಿಕೆಯಲ್ಲಿ ಸ್ವತಃ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಅವರೇ ರೋಟರಿ ಐಸಿರಿ ಹೆಸರನ್ನು ಘೋಷಿಸಿದ್ದು ಹಾಗೂ ಮುಖ್ಯ ಅತಿಥಿ ಡಾ. ಮೋಹನ್ ಆಳ್ವ ಅವರ ಹಸ್ತದಿಂದ ಸ್ಕಿಟ್ ಗೆ ತೃತೀಯ ಬಹುಮಾನ ಪಡೆದ ಕ್ಷಣ ಮರೆಯಲಾಗದ್ದು.** ರೋಟರಿ ಐಸಿರಿ ಸದಸ್ಯರು ಹಾಗೂ ಕುಟುಂಬದ ಸದಸ್ಯರು ಸೇರಿ 24 ಜನ ಜೊತೆಯಲ್ಲಿ ಶೃಂಗೇರಿಗೆ ಪ್ರಯಾಣಿಸಿದ್ದು, ದಾರಿ ಉದ್ದಕ್ಕೂ ಹಾಡು ಮಾತು ನಗು ಚೆಲ್ಲಿದ್ದು ರೋಟರಿ ಧ್ಯೇಯ ಒಡನಾಟವನ್ನು ಬಿಂಬಿಸುತ್ತಿತ್ತು. ಹೊಸ ಮೈಲಿಗಲ್ಲು ದಾಟಿದ ಐಸಿರಿ ಇನ್ನಷ್ಟು ಸಾಧಿಸಲು ಈ ಸ್ಪರ್ಧೆ ಒಂದು ಸ್ಫೂರ್ತಿ."



ರೊ. ಕೃಷ್ಣಪ್ಪ
ಸ್ಕಿಟ್ ರೂವಾರಿ

ನಮ್ಮ ಹಿರಿಯ, ಅನುಭವೀ ಸದಸ್ಯರಾದ ಪೂರ್ವ ಸಹಾಯಕ ಗವರ್ನರ್ ರೊ. MPHF.ಮಂಜುನಾಥ ಉಪಾಧ್ಯ ಸರ್ ಅವರು "**ನನ್ನ ಇಪ್ಪತ್ತೈದು ವರ್ಷಗಳ ರೋಟರಿ ಜೀವನದಲ್ಲಿ ಇದೇ ಮೊದಲ ಬಾರಿಗೆ ಜಿಲ್ಲಾ ಸಾಂಸ್ಕೃತಿಕ ವೇದಿಕೆಯಲ್ಲಿ ಬಹುಮಾನಗಳಿಸುವಂತಾಗಲು ನಿನ್ನಿಂದ ಸಾಧ್ಯವಾಯಿತು**" ಎಂದಾಗ, ಮತ್ತೋರ್ವ ಹಿರಿಯ ಸದಸ್ಯೆ ರೊ. ಸುಶೀಲಾ ಆರ್.ಪೂಂಜಾ ರವರು **ತನ್ನ ಜೀವನದ ರೋಟರಿ ಸೇವೆಯಲ್ಲಿ ಎಷ್ಟೋ ಬಾರಿ ಪ್ರಯತ್ನಿಸಿದರೂ ಈ ಮಟ್ಟಕ್ಕೆ ಹೋಗಲಾಗದೇ ಇದ್ದುದನ್ನು ನೆನಪಿಸಿಕೊಂಡಾಗ,** ಘಟಾನುಘಟಿ ಕ್ಲಬ್ ಗಳ ಸ್ಕಿಟ್ ಅನ್ನು ಶೃಂಗವೈಭವದಲ್ಲಿದ್ದು ಸ್ವತಃ ನೋಡಿದ ಅನುಭವೀ ಕಲಾವಿದ ಶ್ರೀ ನಿತಿನ್ ಕುಮಾರ್ ಬಡಗಬೆಟ್ಟು ಇವರು "**ಹಲವು ತಂಡಗಳಲ್ಲಿ ವೃತ್ತಿಪರ ಕಲಾವಿದ ಸದಸ್ಯರೇ ಅಭಿನಯಿಸಿದ್ದು, ಇನ್ನು ಕೆಲವು ತಂಡಗಳಿಗೆ ದೊಡ್ಡ ದೊಡ್ಡ ಕಲಾವಿದರೇ ತರಬೇತಿ ನೀಡಿದ್ದನ್ನು ಗಮನಿಸಿದಾಗ, ಅವರೆಲ್ಲರ ತೀವ್ರ ಪೈಪೋಟಿಯ ನಡುವೆಯೂ ರೋಟರಿ ಐಸಿರಿ ಈ ಬಹುಮಾನ ಗಳಿಸಿದ್ದು ದೊಡ್ಡ ಸಾಧನೆ**" ಎಂದು ಪ್ರಶಂಸಿದ್ದನ್ನು ಕೇಳಿದಾಗ, ರೋಟರಿ ಜಿಲ್ಲೆಯ 87 ತಂಡಗಳಿದ್ದ ಈ ಸ್ಪರ್ಧೆಯಲ್ಲಿ ಸಾಧಿಸಿದುದರ ಬಗ್ಗೆ ನನಗೆ ನಿಜಕ್ಕೂ ಬಹಳ ಸಂತೋಷವಾಯಿತು ಮತ್ತು ಪರಸ್ಪರ ಸಹಕಾರ ಮನೋಭಾವದ ಉತ್ತಮ ಒಡನಾಟವಿರುವ ರೋಟರಿ ಐಸಿರಿಯ ಸದಸ್ಯನಾಗಿರುವುದಕ್ಕೆ ಬಹಳ ಹೆಮ್ಮೆಯಾಗುತ್ತಿದೆ.

## ಬೌದ್ಧಿಕ ಸಿರಿ ಅಧಿಕಾರ ಮತ್ತು ಕೂದಲು!

ತೇಜಪ್ಪ ಒಂದು ಪಂಚಾಯತ್ ಅಧ್ಯಕ್ಷರಾಗಿದ್ದರು. ತುಂಬಾ ಸರಳ ಮತ್ತು ಸೌಮ್ಯ ಸ್ವಭಾವದವರು. ಅಧಿಕಾರ ಬಂದರೂ ಅವರ ನಡೆ–ನುಡಿ, ವಕ್ತಿತ್ವ ಬದಲಾಗಲಿಲ್ಲ.

ಒಮ್ಮೆ ಅವರು ಇತರ ಹಂತದ ಅಧಿಕಾರಿಗಳೂ ಇದ್ದ ಒಂದು ದೊಡ್ಡ ಸಭೆಗೆ ಹೋಗುವಂತಾಯಿತು. ಅಲ್ಲಿದ್ದವರಲ್ಲಿ ಅನೇಕರು ತಮ್ಮ ಅಧಿಕಾರ ವ್ಯಾಪ್ತಿಯ ಬಗ್ಗೆಲ್ಲಾ ಮಾತನಾಡುತ್ತಾ "ನಾನು ಇಲ್ಲದೆ ಈ ಸಭೆ ನಡೆಯುವುದೇ ಇಲ್ಲ."...."ನನ್ನ ಸಹಿ ಇಲ್ಲದೇ ಒಂದೂ ಫೈಲ್ ಮುಂದೆ ಹೋಗುವುದಿಲ್ಲ"....ನನ್ನ ಒಪ್ಪಿಗೆಯಿಲ್ಲದೇ ಯಾವ ಆದೇಶವೂ ಜಾರಿಯಾಗುವುದಿಲ್ಲ" ಎಂದೆಲ್ಲಾ ಜಂಭಕೊಚ್ಚಿಕೊಳ್ಳುತ್ತಿದ್ದರು.

ಸಭೆಯ ಒಂದು ಹಂತದಲ್ಲಿ ಇಬ್ಬರು ಉನ್ನತ ಅಧಿಕಾರಿಗಳ ನಡುವೆ ಯಾವುದೋ ವಿಷಯಕ್ಕೆ ಒಂದು ದೊಡ್ಡ ವಾಗ್ಯುದ್ಧವೇ ಆರಂಭವಾಯಿತು. ಬಹಳ ಹೊತ್ತಿನವರೆಗೂ ಮುಂದುವರೆದ ಇವರ ಅಧಿಕಾರದ ಅಹಂನ ಮೇಲಾಟದಲ್ಲಿ ಎಲ್ಲರ ಅಮೂಲ್ಯ ಸಮಯ ವ್ಯರ್ಥವಾಗುತ್ತಿರುವುದನ್ನು ನೋಡಿ ನೊಂದ ತೇಜಪ್ಪನವರು ಮೈಕ್ ತೆಗೆದುಕೊಂಡು ತಮ್ಮ ಎಂದಿನ ಶೈಲಿಯಲ್ಲಿ "ನೋಡಿ, ನೀವೆಲ್ಲಾ ಹಿರಿಯ ಅಧಿಕಾರಿಗಳಾಗಿ, ಅನುಭವಿಗಳೂ, ಜವಾಬ್ದಾರಿ ಹೊಂದಿದವರೂ ಆಗಿರುತ್ತೀರಿ. ಆದರೆ ನೆನಪಿಡಿ, ಅಧಿಕಾರವು ಶಾಶ್ವತವಲ್ಲ. ತಲೆಯ ಮೇಲಿರುವ ಕೂದಲು ಉದುರುವಂತೆ ಅಧಿಕಾರದ ಕಾಲಾವಧಿಯೂ ಉರುಳುತ್ತದೆ. ಕೂದಲಿಗೆ ತಲೆಯ ಮೇಲಿರುವಷ್ಟು ಕಾಲ ಸ್ನಾನ, ಸೋಪು, ಶಾಂಪೂ, ಎಣ್ಣೆ ಮುಂತಾದವುದನ್ನು ಹಾಕಿ ಚೆನ್ನಾಗಿ ನೋಡಿಕೊಳ್ಳುತ್ತಾರೆ. ಅದೇ ಕೂದಲು ಉದುರಿ ಬಿದ್ದಾಗ ಅದನ್ನು ಎತ್ತಿಕೊಳ್ಳಲೂ ಹೋಗುವುದಿಲ್ಲ. ನಂತರ ಗುಡಿಸಿಬಿಡುತ್ತಾರೆ. ಹಾಗೆಯೇ ನಾವೂ ಸಹ... ಅಧಿಕಾರವಿದ್ದಾಗ ಇರುವ ಸೌಲಭ್ಯಗಳು ಅಧಿಕಾರ ಹೋದ ನಂತರ ಸಿಗಲಾರವು. ಹಾಗಾಗಿ ಅಧಿಕಾರವಿದ್ದಾಗಿನ ನಿಮ್ಮ ಉತ್ತಮ ನಡವಳಿಕೆ ಮತ್ತು ಮಾಡಿದ ಉತ್ತಮ ಕೆಲಸಗಳು ಮಾತ್ರ ನಮಗೆ ಗೌರವ ತರಬಲ್ಲುವು" ಎಂದರು.

ಈ ಮಾತು ಕೇಳಿ ಎಲ್ಲರೂ ಕ್ಷಣಕಾಲ ಮೌನವಾಗಿದರು.

ಸಭೆ ಮುಗಿದು ಹೊರಡುವಾಗ ತೇಜಪ್ಪನವರ ಬಳಿ ಬಂದ ಯುವಕ ಅವರನ್ನು ಅಭಿನಂದಿಸುತ್ತಾ "ಅಧಿಕಾರ, ಹುದ್ದೆ, ಸ್ಥಾನ - ಇವೆಲ್ಲಾ ತಾತ್ಕಾಲಿಕ. ನಮ್ಮ ಮೌಲ್ಯವನ್ನು ಕಾಪಾಡುವುದು ನಮ್ಮ ನಡವಳಿಕೆ, ವಿನಯ ಮತ್ತು ಸೇವೆ ಮಾತ್ರ" ಎಂದನು.

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ನವೆಂಬರ್ 18ರ ಹೊರಾಂಗಣ ಸಭೆಯ ಛಾಯಾಚಿತ್ರಗಳು

















ರೊ.ಅನಿಲ್ ಕುಮಾರ್, ಅಧ್ಯಕ್ಷರು

ಆತ್ಮೀಯರೇ,

ರೋಟರಿ ಐಸಿರಿ ಸ್ಥಾಪಕಾಧ್ಯಕ್ಷರಿಂದ ಆರಂಭಗೊಂಡು ಇಂದಿನವರೆಗೆ ಎಲ್ಲಾ ವಿಚಾರದಲ್ಲೂ ತನ್ನದೇ ಆದ ಛಾಪನ್ನು ಮೂಡಿಸುತ ಬಂದಿದೆ. ಈ 2025–26ನೇ ಸಾಲಿನ ಸಾಂಸ್ಕೃತಿಕ ಕಾರ್ಯಕ್ರಮದ ಸಂಯೋಜಕರಾದ **ರೊ. ಡಾ. ಸ್ವಾತಿ ಪೈ** ಯವರ ಅವಿರತ ಶ್ರಮದ ಫಲದಿಂದಾಗಿ ರೋಟರಿ ಐಸಿರಿಯು ರೋಟರಿ ಜಿಲ್ಲಾ 3182 ರಲ್ಲಿ ಕಿರು ನಾಟಕ, ಗ್ರೂಪ್ ಡ್ಯಾನ್ಸ್, ಸೋಲೋ ಡ್ಯಾನ್ಸ್ (annet) ಸ್ಪರ್ಧೆಗಳಲ್ಲಿ ಅದ್ಬುತವಾಗಿ ಪ್ರದರ್ಶನ ನೀಡಿದ ಎಲ್ಲರಿಗೂ ಅಭಿನಂದನೆಗಳು.

ಅದೇ ರೀತಿ, ನಮ್ಮ ಕಾರ್ಯದರ್ಶಿ ರೊ. ಕೃಷ್ಣಪ್ಪನವರು ರಚಿಸಿ, ನಿರ್ದೇಶಿಸಿದ "ಜೈ ಜವಾನ್ ಜೈ ಕಿಸಾನ್" ಕಿರು ನಾಟಕದ ಮುಖಾಂತರ ನವೆಂಬರ್ 23ರಂದು ಶೃಂಗೇರಿಯಲ್ಲಿ ನಡೆದ ಜಿಲ್ಲಾ ಸಾಂಸ್ಕೃತಿಕ ಕಾರ್ಯಕ್ರಮ ಶೃಂಗ ವೈಭವದಲ್ಲಿ ತೃತೀಯ ಬಹುಮಾನ ದೊರೆತಿರುವುದು ರೋಟರಿ ಐಸಿರಿ ಸ್ಥಾಪನೆಗೆ ಕಾರಣೀಭೂತರಾದ ಎಲ್ಲಾ ಸದಸ್ಯರು ತಾವು ಕಟ್ಟಿದ ಕ್ಲಬ್ ನ ಬಗ್ಗೆ ಹೆಮ್ಮೆ ಪಡುವ ವಿಚಾರ.

ಈ ಸಾಧನೆಗೆ ಮುಖ್ಯ ಕಾರಣ ಎಲ್ಲಾ ಸದಸ್ಯರಿಗೆ ಕ್ಲಬ್ ನ ಬಗ್ಗೆ ಇರುವ ಅಭಿಮಾನ ಹಾಗೂ ಸಹಕಾರ.

🙏ನಿಮ್ಮೆಲ್ಲರ ಸಹಕಾರಕ್ಕೆ ಧನ್ಯವಾದಗಳು.

## ಕಾರ್ಯದರ್ಶಿಯವರ ವರದಿ



ರೋಟರಿ ಐಸಿರಿಯ 18ನೇ ವಾರದ ಸಭೆಯು ತಾ. 18/11/2025ರಂದು ಹೊರಾಂಗಣ ಸಭೆಯಾಗಿ ರೊ. PHF. ಡಾ. ಪ್ರಭಾಕರ್ ಯು. ರೆಂಜಾಳರ ಮನೆಯಲ್ಲಿ ನಡೆಯಿತು. ದಂಡಾಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಅಧ್ಯಕ್ಷರಿಗೆ ಕೊರಳ ಲಾಂಛನ ತೊಡಿಸಿ, ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೊ. PHF. ಡಾ. ಪ್ರಭಾಕರ್ ಯು. ರೆಂಜಾಳ ಅವರು ಪ್ರಾರ್ಥನೆ ನಡೆಸಿದರು. ಅಧ್ಯಕ್ಷ ರೊ. ಅನಿಲ್ ಕುಮಾರ್ ಅವರು ಸಭೆಯನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವಾರದ ವರದಿಯನ್ನು ಮಂಡಿಸಿದರು.

ರೊ. PHF. ಡಾ. ಪ್ರಭಾಕರ್ ಯು. ರೆಂಜಾಳ ಅವರು ಹೊರಾಂಗಣ ಸಭೆಯ ಉದ್ದೇಶವನ್ನು ವಿವರಿಸಿದರು. ಅಂತೆಯೇ ಧನ್ವಂತರಿ ಪೂಜೆಯ ಮಹತ್ವ ತಿಳಿಸಿದರು. ರೊ. PHF. ಗುರುಪ್ರಸಾದ್ ಕಾಮತ್ ಅವರು ಇಂದಿನ ಸಂಪನ್ಮೂಲ ವ್ಯಕ್ತಿಯಾಗಿ TRF ಬಗ್ಗೆ ವಿಸ್ತೃತ ಮಾಹಿತಿ ನೀಡಿದರು. ವಾರದ ಬುಲೆಟಿನ್ ಐಶ್ವರ್ಯವನ್ನು ರೊ. PHF. ಗುರುಪ್ರಸಾದ್ ಕಾಮತ್ ಅವರು ಬಿಡುಗಡೆ ಗೊಳಿಸಿದರು. ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಅವರು ಸದಸ್ಯರ ಸತತ ಪ್ರೋತ್ಸಾಹಕ್ಕೆ ವಂದಿಸಿ, ಮುಂದಿನ ದಿನಗಳಲ್ಲಿ Dr. ರೆಂಜಾಳ ಅವರ ಸಹಾಯದಿಂದ ಆರೋಗ್ಯ ಮಾಹಿತಿಯನ್ನು ಪ್ರಕಟಿಸುವುದಾಗಿ ತಿಳಿಸಿದರು.

ರೊ. ಪ್ರಕಾಶ್ ಶೆಣೈ ಅವರು ಕಳೆದ ವಾರದಲ್ಲಿ ನಡೆದ ಉತ್ತಮ ಕಾರ್ಯಕ್ರಮಗಳನ್ನು ಪ್ರಶಂಸಿಸಿದರು. ರೊ. ಕೊರಗಪ್ಪ ಶೆಟ್ಟಿಗಾರ್ ಅವರು ರೋಟರಿ ಐಸಿರಿಯ ಉತ್ಸಾಹಭರಿತ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ರೊ. ಸ್ಮಿತಾ ಜಿ. ಕಾಮತ್ ಅವರು PHF ಪಡೆಯುವ ರೀತಿ ಮತ್ತು ಅದು ನೀಡುವ ಗರಿಮೆಯನ್ನು ವಿವರಿಸಿದರು.

ಅಂತಾರಾಷ್ಟ್ರೀಯ ಸೇವಾ ನಿರ್ದೇಶಕರಾದ ರೊ. MPHF. ಮಂಜುನಾಥ್ ಉಪಾಧ್ಯ ಎಮ್. ಅವರು TRF ನ ಗ್ಲೋಬಲ್ ಗ್ರ್ಯಾಂಟ್ ಬಗ್ಗೆ ವಿವರಿಸಿದರು. DG visit ನಲ್ಲಿ ನಡೆಯಬೇಕಾಗಿರುವ ಕಾರ್ಯಕ್ರಮಗಳ ಬಗ್ಗೆ ಸಲಹೆ ನೀಡಿದರು. ರೊ. ಅಶೋಕ್ ನಾಯಕ್ ಅವರು ಆರೋಗ್ಯ ಸಮಸ್ಯೆ ಇರುವ ಓರ್ವ ಮಹಿಳೆಯ ಬಗ್ಗೆ ಮಾಹಿತಿ ನೀಡಿ ರೋಟರಿ ಐಸಿರಿಯ ಮೂಲಕ ಸಹಾಯಧನ ನೀಡುವುದಾಗಿ ಘೋಷಿಸಿದರು

Membership chairman ರೊ. ಗೀತಾಶ್ರೀ ಎಂ. ಉಪಾಧ್ಯ ಅವರು ಹೊಸ ಸದಸ್ಯರ ಸೇರ್ಪಡೆಯ ವಿಧಾನಗಳನ್ನು ವಿವರಿಸಿದರು. ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಅವರು ಮಕ್ಕಳ ದಿನಾಚರಣೆಯನ್ನು ಆಯೋಜಿಸಿದಕ್ಕೆ ಮತ್ತು ಆಧಾರ್ ತಿದ್ದುಪಡಿ ಕಾರ್ಯಕ್ರಮದ ಯಶಸ್ಸಿಗೆ ಅಧ್ಯಕ್ಷರನ್ನು ಪ್ರಶಂಸಿಸಿದರು. ರೊ. PHF. ಡಾ. ಪ್ರಭಾಕರ್ ಯು. ರೆಂಜಾಳ ಅವರ ಮನೆಯಲ್ಲಿ ನಡೆದ ಧನ್ವಂತರಿ ಪೂಜೆಯಲ್ಲಿ ಭಾಗವಹಿಸಲು ಅವಕಾಶ ನೀಡಿದ್ದಕ್ಕೆ ಕೃತಾರ್ಥತೆ ವ್ಯಕ್ತಪಡಿಸಿದರು. ಮುಂಬರುವ ಡಿಸ್ಟ್ರಿಕ್ಟ್ cultural ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ ಶುಭಕೋರಿದರು. ಆತಿಥ್ಯ ವಹಿಸಿದ ರೊ. PHF. ಡಾ. ಪ್ರಭಾಕರ್ ಯು. ರೆಂಜಾಳ ಅವರ ಮಾವ ರೊ. ಕೆ. ಆರ್. ಬಲ್ಲಾಳ್ ಅವರನ್ನು ಗುರುತಿಸಲಾಯಿತು.

ಅಧ್ಯಕ್ಷರು ಹೊರಾಂಗಣ ಸಭೆಗೆ ಆತಿಥ್ಯ ನೀಡಿದ ರೊ. PHF. ಡಾ. ಪ್ರಭಾಕರ್ ಯು. ರೆಂಜಾಳ ಹಾಗೂ ಸಂಪನ್ಮೂಲ ವ್ಯಕ್ತಿ ರೊ. PHF. ಗುರುಪ್ರಸಾದ್ ಕಾಮತ್ ಅವರನ್ನು ಗುರುತಿಸಿ ಗೌರವಿಸಿದರು. ಅಧ್ಯಕ್ಷರು ಜಿಲ್ಲಾ ಗವರ್ನರ್ ಅಧಿಕೃತ ಭೇಟಿಯಲ್ಲಿ ಸದಸ್ಯರ ಪಾತ್ರವನ್ನು ತಿಳಿಸಿದರು. ಆಧಾರ್ ತಿದ್ದುಪಡಿ ಕಾರ್ಯಕ್ರಮಕ್ಕೆ ಮೂಲತಃ ಶ್ರಮಿಸಿದ ರೊ. ಪಾಂಡುರಂಗ ಲಾಗ್ವಾಂಕರ್ ಮತ್ತು ರೊ. ಪ್ರಭಾಕರ್ ಶೆಟ್ಟಿ ಇವರನ್ನು ಇವರ ಅನುಪಸ್ಥಿತಿಯಲ್ಲಿ ಅಭಿನಂದಿಸಿದರು. Lucky Rotarian ಆಯ್ಕೆಯನ್ನು ರೊ. MPHF. ಮಂಜುನಾಥ್ ಉಪಾಧ್ಯ ಎಮ್. ಅವರು ನಡೆಸಿದರು. ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಅವರು ಅದೃಷ್ಟಶಾಲಿ ವ್ಯಕ್ತಿಯಾಗಿ ಮೂಡಿಬಂದರು.

ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ಧನ್ಯವಾದ ಸಮರ್ಪಿಸಿದರು. ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು.

## "ಐಶ್ವರ್ಯ" 20ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ **ಇಪ್ಪತ್ತನೇ** ಆವೃತ್ತಿಯನ್ನು ವಾರದ ಸಭೆಯ ಸಂಪನ್ಮೂಲ ವ್ಯಕ್ತಿ, ಜಿಲ್ಲಾ ಆರ್.ಸಿ.ಸಿ. ಉಪಸಭಾಪತಿ ರೊ. PHF. ಗುರುಪ್ರಸಾದ್ ಕಾಮತ್ 18/11/2025ರಂದು ಬಿಡುಗಡೆಗೊಳಿಸಿದರು.



ರೋಟರಿ ಐಸಿರಿಯ 18ನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ರೊ. MPHF. ಮಂಜುನಾಥ್ ಉಪಾಧ್ಯ ಎಮ್. ಅವರು ನಡೆಸಿದರು. ಅಧ್ಯಕ್ಷ ರೊ. ಅನಿಲ್ ಕುಮಾರ್ ಅವರು ಅದೃಷ್ಟಶಾಲಿ ವ್ಯಕ್ತಿಯಾಗಿ ಆಯ್ಕೆಯಾದರು.



ಈ 2025–26ನೇ ಸಾಲಿನ ಸಾಂಸ್ಕೃತಿಕ ಕಾರ್ಯಕ್ರಮದ ಸಂಯೋಜಕರಾದ ರೊ. ಡಾ. ಸ್ವಾತಿ ಪೈ ಯವರ ಅವಿರತ ಶ್ರಮದ ಫಲದಿಂದಾಗಿ ರೋಟರಿ ಐಸಿರಿಯು ರೋಟರಿ ಜಿಲ್ಲೆ 3182ರ ವಲಯ ಮಟ್ಟದ ಎಲ್ಲಾ ಒಂಭತ್ತು ಸ್ಪರ್ಧೆಗಳಲ್ಲೂ ಭಾಗವಹಿಸಿ ಎಲ್ಲದರಲ್ಲೂ ಬಹುಮಾನಗಳಿಸಿದ್ದು ಮಾತ್ರವಲ್ಲದೇ ಮೊದಲ ಬಾರಿಗೆ ಜಿಲ್ಲಾ ಮಟ್ಟದಲ್ಲಿ ಮೂರು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಒಂದರಲ್ಲಿ ಬಹುಮಾನಗಳಿಸಿತು. ಈ ಅವಿಸ್ಮರಣೀಯ ಸಾಧನೆಗೆ ಹೃತ್ಪೂರ್ವಕ ಅಭಿನಂದನೆಗಳು.